Lahari
# Communique
NEWS LETTER FOR PRIVATE CIRCULATION AMONG THE LEGAL FRATERNITY

**Volume 12** **October 2000** **Part 7**

## Vacations - 2001

The High Court of Karnataka and the Supreme Court will have vacations during 2001 as mentioned below :

High Court : Summer vacation 23.4.2001 to 27.5.2001, Dasara vacation 22 to 24.10.2001, Winter vacation 24 to 31.12.2001

Supreme Court : Summer vacation 14.5.2001 to 8.7.2001, Dussehra Holidays 22 to 27.10.2001, Christmas & New Year's Holidays 17.12.2001 to 1.1.2002

## Karnataka HC gets new CJ

The president has appointed Mr. Justice Ponaka Venkatarama Reddy, a judge of the Andhra Pradesh High Court, as the new chief justice of Karnataka High Court. Pursuant to this appointment Justice Reddy was sworn in as the chief justice in a function held at Karnataka Raj Bhavan on 18.10.2000 by Smt. V.S. Ramadevi, Governor of Karnataka.

Mr. Justice Ponaka Venkatarama Reddy, who took over as the 21st Chief Justice of Karnataka High Court was a senior Judge of the A P High Court before his elevation. Before his appointment in A P High Court Justice Reddy was the counsel for Indian Railways and many other Union Government undertakings. He was also associated with the A P Tax Bar Association. As a Judge of A P High Court he prepared a report on management of sub ordinate courts. He was the President of Andhra Pradesh Judicial Academy. He is one of the founder members of the Society for National Academy for Legal Studies and Research, Hyderabad which later became NALSAR University. Mr. Reddy who hails from an agricultural family in Nellore District was born in August 1940. He was appointed as a Judge of A P High Court in March 1990 after 27 years of practice.

## HC seeks status report

The Karnataka High Court on October, 20 directed all district judges in the state to submit status report regarding adequacy and condition of court buildings, judicial and staff quarters under their jurisdiction, on a public interest writ petition seeking directions to the state government to provide sufficient buildings, infrastructure, staff and to implement various judicial projects. Acting Chief Justice Ashok Bhan and Mr. Justice R. Gururajan constituting the division bench also directed the district judges to indicate in their report need for additional accommodation, vacancies against sanctioned posts. This PIL has been filed by two advocates viz., Mr. S.N. Prashanth Chandra from Bangalore, Mr. Krishna raj from Kunigal and two other persons viz., Mr. M.M. Mankikar and Dr. K.E. Nagabhushana from Bangalore.

## SC gets new judges

On October 13, 2000 president K.R. Narayanan appointed Mr. Justice Brijesh Kumar and Mr. Justice Bishwanath Agarwal as the new Judges of Supreme Court of India. While Mr. Justice Brijesh Kumar was the Chief Justice of Guahati High Court before his elevation Mr. Justice Bishwanath Agarwal was the Chief Justice of Orissa High Court. These two judges were sworn in as judges of the Supreme Court on October 19, 2000.

## Thought for the month

when a man points a finger at someone else he should remember that four of his fingers are pointing at himself - Louise Niyer

## SC erases HC judgment

In a significant judgment, the Supreme Court has erased a Karnataka High Court judgment discharging former state Chief Minister S. Bangarappa and his then private secretary R. Suri Babu in a disproportionate assets case. "we order that the revision petitions filed in the High Court by the respondends would stand withdrawn and consequently the impugned order will stand erased", a division bench comprising Justice K.T. Thomas and Justice R.P. Sethi said in a recent order. Allowing the CBI appeal against the Karnataka High Court judgment discharging Mr. S. Bangarappa against whom the designated court had ordered framing of charges along with four others directed that the designated court should decide the case on merits without noticing the observations made by the High Court while allowing the revision petition filed by the accused.

## Mysore lawyer warned

In a bazire incident in the court hall of the apex court headed by Mr. Justice S.P. Bharucha, Mr. Venugopal an advocate from Mysore was warned not to interfere in court work. This incident took place on October 18 when Mr. Venugopal attempted to make submissions on behalf of Tada detenus of Mysore as soon as hearing of Abdul Karim's case (Challenging the release of Tada detenus) resumed. Mr. Justice S.P. Bharucha retorted by questioning Mr. Venugopal "who are you?" when Mr. Venugopal wanted his submissions should be heard he was warned by the court that in case he does not resume his seat he will be hauled up for contempt. Finally Mr. Venugopal took cue from the court and gave up his attempt.

## Around the Courts

☐ **Section 14-D r/w section 25-B of the Delhi Rent Control Act, 1958 - Granting of special leave to the tenant to challenge eviction order would frustrate a social purpose;**

In a judgement delivered during first week of october 2000 a bench comprising Mr. Justice S Rajendra Babu and Mr. Justice D.P. Mohapatra, of the apex court, ruled that a petition for eviction filed by a widow under section 14-D of the Delhi Rent Control Act, 1958 should not be frustrated by granting leave to the tenant by allowing to raise plea refuting the landlord's claim. The court said that "the provision is intended to serve a social need to help a widow in getting pasession of the premises required for her personal occupation and to sub-serve that purpose she has been included in the special class of landlords who are entitled to recover possession of the premises let out by them when they require the same for self-occupation".

While dismissing an appeal filed by the tenant with costs of Rs. 5,000/- preferred against the Delhi High Court judgment confirming the Delhi Additional Rent Controller directing his eviction from the rented premises the court observed that "unless a real and substantial case is made out on the averments made in the affidavit by the tenant in support of the petition filed under section 25-B of the Act, the proceedings should not be dragged on unnecessarily and should be disposed of with due expedition".

☐ **Equal pay for equal work, a casual labourer cannot be denied equal wages vis-a-vis regular employees;**

In a dicision rendered during the first week of october 2000, the apex

See Page 3

## Nyayamithra Bank inaugurated

A long time felt need of the lawyers community was fulfilled on 25-10-2000 with the inauguration of Nyayamithra Co-operative Bank by the hon'ble Chief Minister of Karnataka Sri S.M. Krishna at the annexe building of the High Court of Karnataka, Bangalore. The inaugural function was presided over by Mr. Justice P. Venkatarama Reddy, Chief Justice of High Court of Karnataka. The chief guests at the function included Sri D.B. Chandregowda, minister for Law and Parliamentary Affairs, Sri D.K. Shivakumar, Minister for co-operation, Sri K.N. Subba Reddy, MLA, Sri A.N. Jayaram, Advocate-General, Sri Jayakumar S Patil Chairman, KSBC, Sri K.L. Manjunath, President, AAB, and Sri M.S. Mandanna, President, BACS Ltd. The Board of the Directions of the bank are s/s H.K. Vasudeva Reddy, President, M. Lokesh, Vice-President, K.L. Manjunath, M.S. Mandanna, K.N. Subba Reddy, K.N. Putte Gowda, G. Nagarajulu Naidu, M. Shantha, Y. Vasudeva, Aswath, J. Ninge Gowda, P.S. Rajagopal, G.K. Suresh, all directors.

## Quote Hanger

If you are resolutely determined to make a lawyer of yourself, the thing is more than half done already. Always bear in mind that your own resolution to succeed is more important than any other thing. - Abraham Lincoln.

Courtesy : Mr. B.S. Narayan, Advocate.

## Foreign Tours

- On 26.10.2000 Mr. K.T. Chennabasave Gowda, Advocate, returned to Bangalore after three months tour of USA.
- On 28.10.2000 Mr. S. Vijayashankar, Senior Advocate, left Bangalore for Malaysia. He is expected to return by 7.11.2000.

**Read Communique**

## Consumer Notes

Recently II Additional Consumer Forum, Bangalore, found two city advocates guilty of deficient service and has directed them to compensate their clients. In one case N. Shivakumar, Smt. Narasamma and B.N. Shankar Kumar had complained that their counsel Sri L. Shankaranarayana had given them wrong advice causing them financial loss and mental agony. According to the complainants the counsel was to draft a partition deed and for that purpose they had paid a fee of Rs. 5,000/-. Admitting the plea of complainants about the wrong advice the Forum directed the advocate to pay Rs. 10,000/- to the complainants within four weeks. In the second case H. Swamy Prasad had complained that he had engaged the services Sri V. Lakshminarayana, Advocate, for preparing an appeal to be filed before the Administrative Tribunal and paid Rs. 1,000/- to the lawyer. When the advocate failed to prepare the appeal the complainant requested him to return the papers. But the advocate didnot oblige. The version filed on behalf of the lawyer contending that the appeal could not be prepared as the complainant had not supplied all the relevant papers. Accepting the case of the complainant the Forum directed the advocate to refund of Rs. 1,000/- to the complainant with costs of Rs. 250/-

## Kolar Diary

A law workshop under joint auspices of the Karnataka State Bar Council and Bar Association of Chikkaballapur was held at Chikkaballapur from 1st to 6th October, 2000. About 50 Advocates from Chikkaballapur and nearby places participated in the workshop. Her excellency V.S. Ramadevi, Governor of Karnataka inagurated the workshop. Sri D.B. Chandre Gowda, Karnataka Minister for law and Parliamentary Affairs delivered the Valedictory Address.

## Know this

During this month Mr. Vojislav Kostunica (56) replaced Mr. Slobodan Milosevic as the President of the peoples republic of Yugoslavia. Mr. Kostunica is a Law Professor.

# Social Audit of Working of the Constitution

Dr. G.R.S. Rao

**From the last issue**

### Constitutional Design

The constitutional design provided for a network of institutions : the Union, States and Panchayat Raj institutions on the vertical plane and the legislative, executive and judicial limbs on the horizontal plane. Each unit is assigned autonomous status, inorder to be able to perform complementary tasks and thus fulfil common objectives. Legitimacy and credibility of the system was to be secured, sustained and enhanced through two cardinal processes of democracy viz., decentralization and participation, lending transparency in operations and accountability for performance.

A wide range of institutions, such as committees of legislature aimed at promoting legislative productivity, efficiency and effectiveness; a set of 'watch-dog' institutions and a team of constitutional umpires are provided by the constitution. The constitutional scheme provides for balancing and harmonizing the functioning of the network of institutions through mechanisms like the Inter-State Council, the Finance Commission, Zonal Councils and Water Tribunals.

### The Institutions at Work

As against the designed parameters of complementality, balance, harmony and synergy, a culture of heirarchy, versus confrontation has crept into the process of constitutional democracy and governance primarily from one source - the political parties as the prime movers of democracy, due to the emergence of personality cult, authoritarianism, centralization of power, competitive populism and a multitude of parties with regionalist ethos. The issue of balance and harmony are viewed in terms of centre versus states, not of the nation. The personality cult and high degree of centralization of political organizations have debunked the differentiation between the party, the government and the state. Even worse, with political fragmentation and shifting of sights from service of the 'people' to securing 'power' at any cost and to be retained at all costs, Indian polity has been fractured.

The present status of the prime movers of India's constitutional democracy can be summed up as Biharization meaning that if you muster numbers, by whatever means, you can legitimize any illegitimate activity, any naked abuse of the constitution, as if numbers is all about democracy. Political immorality has debilitated the institutions of constitution, we are at the brink of a political paralysis. An emerging trait of political parties in India is their corporatization with all the attendant consequences. When political parties adopt and internalise market ethos, the stigma attached to the play of money power in politics melts away. Even political 'match-fixing' is projected as a legitimate, adjunct to parliamentary democracy. It is only logical that once the political system turns malignant, it creeps into the body politic, a la Bhopal gas. The founding fathers hoped that the sanctity of political process would be maintained and strengthened as a part of the process of democratization. But the fears expressed by them over the consequences when "power outstrips ability" have come true.

### Legislative Process and Functionaries

Under ideal democratic conditions, legislatures are assigned the task of articulating the problems of the people, defining and prioritizing them, and harmonizing the diverse and occasionally conflicting values, identities and interests underlying the issues. The constitution provided sanctity to the legislatures through immunities for debates within the legislatures. The constitution has clearly set the national agenda - The Democratic Constitutional Minima, and also stipulated a time frame for the fulfillment of certain conditions considered cardinal for democracy. As all the elected representatives solemnly swear by the constitution it should mean constitutional consensualism. The legislatures are entrusted with the task of overseeing the administrative apparatus, ensuring transparency, and translation of legislated agenda into action. They are also assigned the task of facilitating and ensuring the justice delivery system.

**to be continued**

# The Hostage Crisis and the Surrender Syndrome

C. B. Srinivasan, LL.B., Advocate

The legalese of the Rajkumar kidnap episode by the brigand Veerappan has found a resting place by the conclusion of the proceedings before the Supreme Court. While all the details of the proceedings are found reported in the newspapers the core issue that was grappled by the Supreme Court appears to have missed the notice of the public. Here is an attempt to analyse the legal issue debated.

Section 494 of the old Criminal Procedure Code (1898), and 321 of the new Criminal Procedure Code (1974) are sister provisions affecting sinister situations. The primary objective of the statutory prescription is to prevent unnecessary trials. It empowers the Prosecutor to withdraw any person from prosecution and for that, obtain the consent of the Court. In this situation, the dramatis personae can be the victim of the crime; the supposed criminal; the Prosecutor; the executive limb of the State; and the Judicial limb of the State. Administration of criminal justice is possible when there is harmony of action between the prosecutor and the court. Instances of the power being invoked have been reported in judicial precedents of the Supreme Court. They have indicated the circumstances when the Supreme Court has frowned on the Surrender Syndrome.

**Surrender of the Court to the Prosecutor**

In an early post Independence decision, the Supreme Court heard a joint attempt by the State of Bihar, and the accused (who had been withdrawn from prosecution), seeking declaration of the law. There was a murder of a person in the course of a riot and 28 persons had been prosecuted for offences of murder and common intention. As against one of the accused, the charge was that he abetted the murder by reason of certain speeches and exhortations at meetings or groups the day previous to the murder. Before the trial began, the prosecutor sought leave to withdraw this accused from prosecution on the ground that it would not be just and expedient to proceed with the prosecution. The evidence regarding the complicity of the accused was meagre. There was only a single item of evidence of a dubious nature. It was not likely to establish a prima facie case. The court gave its consent for withdrawal. But, in revision, the Chief Justice of the High Court reversed this consent of the court. In his opinion, the authority was of the court to garner evidence during trial before it. This function of the court had been surrendered to the prosecutor.

The Supreme Court was of the opinion that the provision did not insist on the Court's discretion to give consent only with reference to the material gathered by the judicial method. There was no matter to be determined judicially. The simple function of the court is to satisfy itself that the executive function of the Public Prosecutor has not been improperly exercised. If there was no attempt to interfere with the normal course of justice for illegitimate reasons or purposes, the court's function is to supplement, at a higher level, and prevent abuse. The evidence in the case was oral evidence of witnesses who could not speak of the exhortations of the accused at various places. If the prosecutor thought that it was meagre to secure conviction, and the court accepted it, there was no legality in the apprehension of the court surrendering to the prosecutor. The withdrawal was justifiable. (State of Bihar Vs. Ram Naresh, A.I.R. 1957 S.C. 389).

Then came the case of State of Orissa Vs. Chandrika Mohapatra, A.I.R. 1977 S.C. 903 in which the prosector said that it was in expedient to proceed with the case, and the evidence collected during investigation was meagre. The Magistrate gave his consent for withdrawal. But, the High Court suo motu called for the records and set aside the order. The Supreme Court reversed this decision and reiterated that there was no question of surrender by the court to the prosecutor. The court said that the plea of the prosecutor that the withdrawal is sought because it was not possible to produce sufficient

See Page 4

# Readers write

The Insurance Act, 1938 was legislated way back in the English system of colonial rule. Ironically, no amendment has been made by the Parliament despite the ruling by their lordships of the Supreme Court is a matter of serious concern. Interestingly, section 39 of the Act deals with "nominee" of the deceased policy holder and technically the insurance company is of the view that the nominee is the payee or receiver. Nowhere under the said provision, it says that the nominee acquires title to the amount to the exclusion of all other legal heirs. To illustrate a situation, if a married policy holder dies intestate leaving behind him the assured policy on his life incorporating the nomination to his natural mother, in that event whether nominee has a locus-standi to receive the claim on behalf of the legal heirs or the widow with or without the encumberance of minor childeren as immediate class I legal heir? The expression "heir" under the law of intestate succession among Hindus to mean any person male or female who is entitled to succeed to the property of an intestate. The hub of controvercy arises where the relationship is strained or could not be patched up between the real nominee vis-a-vis, legal heirs of the deceased policy holder. Their lordships of the Supreme Court in the case of vishin N. Khanchandani vs Vidya Lachmondas. (AIR SC weekly reporter 2932) has laid down the test, holding that any amount paid to the nominee becomes the estate of the deceased. Such an estate devolves upon all persons who are entitled to succession under law, custom, testament of the deceased holder. In other words, logically, the nominee has no beneficial interest and to act only as a trustee. The said ruling operates "jus in rem" in protecting the rights of all the persons entitled to succession, would become a binding precedent under article 141 and 144 of the Constitution of India on sub ordinate courts and quasi-judicial authorities like the Insurance Company. It is in this background, the insertion of a "proviso" to section 39 of the Insurance Act by the parliament in conformity with the aforesaid ratio of the judgment is the need of the hour conferring powers to the Insurance authorities to settle the claim proportionately to the legal heirs of the deceased based on the evidence of legal heirship certificate issued by the Taluk Magistrate in the mutual interest of the litigents. Will the Union of India moot the proposal for amendment to the Insurance Act in the winter session of the Parliament?

*S.V. Subramanyam, Advocate*

# Around the Courts

**From Page 1**

court (Mr. Justice S. Rajendra Babu and Mr. Justice B.P. Mohapatra) upheld the judgment of Calcutta High Court ruling directing payment of equal pay to casual labourers vis-a-vis regular employees of the Food corporation of India. Dismissing the appeal filed by the FCI the court said that the appeal "is misconceived and deserves to be dismissed with costs quantified at Rs. 10,000/-."

The Calcutta High Court judgment had said, "since some casual workers appointed directly by the appellant and some employed by contractors are working in the same godown and on the same work, there could not be any scope for making any difference and to deny equal pay for equal work. The wages will have to be paid regularly to the respondents at the same rate at which it was paid to the regular employees of the appellant doing identical work which has to be worked out on a daily rate basis from March 1989".

☐ **Departmental inquiry against govt. staff-judicial review Permissible;**

In a judgment delivered during fourth week of October a bench of the apex court comprising Mr. Justice G.B. Pattanaik and Mr. Justice Umesh Chandra Banerjee, ruled that judicial review is available even in case of departmental proceedings. "judicial review of administrative action is feasible and the same has its application to its fullest extent in even departmental proceedings where it is found that the recorded findings are based on no evidence or the findings are totally perverse or legally untenable", the bench observed. Upholding an Allahabad High Court judgment quashing a departmental inquiry findings against an officer of Kumaon Vikas Mandal Nigam the bench observed that doctrine of natural justice was an integral part of the administrative jurisprudence of this country.

The departmental inquiry had proceded against the officer without being served the documents which showed the irregularities committed by him and was given no chance to defend himself. The court observed that the entire chain of events smacks of a personal clash and adoption of a method in hot haste unknown to law.

## Humour in Courts

The civil judge had heard plaintiffs counsel on IA No. 1 seeking ex-parte Temporary Injunction. While writing the order on IA No. 1 Judge observed "The plaintiffs counsel vehemently argued about the emergent nature of the case and pleaded for granting ex-parte order. Considering the emergent nature of the case emergent notice on IA No. 1 and suit summons ordered".

## Miscellany

☐ On 2.10.2000 Mr. B. Basavaraju, Advocate and former treasuerer of AAB, opened his Law Chamber at #30, I Floor, 5th Main Road, Gandhinagar, Bangalore - 560 009. Ph. : (O) 2257561, (R) 3383195

☐ On19.10.2000 a programme of Bharatanatya Rangapravesham was held at Dr. H.N. Kalakshetra, Bangalore where Kumari Sandhya and Kumari Divya performed their inaugural Bharatanatya Programme. Mr. Justice K. Sridhar Rao, Judge, High Court of Karnataka, Dr. M. Suryaprasad, Editor General "Gunagrahi" and Art Critic, The Hindu and Professor K.E. Radhakrishna, Principal. Seshadripuram College, Bangalore were the chief guests. Kumari Sandhya and Kumari Divya are the daughters of Smt. Poornima Prabhakar and Sri K. Prabhakar, Advocate.

☐ M/s Raj & Reddy, Advocates, have shifted their chamber to a new premises i.e., #109, II Floor, Pranava Complex, 5th Cross, Opp. Geetanjali Theatre, Malleswaram, Bangalore-560003. Ph. : 3363205

## Wedding

We are glad to inform that on 2.10.2000 Mr. Deepak, Advocate, married Ms. Savitha at Bangalore.

## Obituary

We regret to inform that,

☐ On 6.10.2000 T.S. Chandraiah (80), Advocate, passed away at Bangalore.

☐ On 29.10.2000 M.N. Gadag, an advocate practising at Bangalore passed away at Belgaum.

## Campus watch

The Web site of the centre for Intellectual Property Rights, Research and Advocacy (CIPRA) of the National Law School of India University was inaugurated at Bangalore on October, 22. The web site www.iprlawindia.org provides information on Intellectual Property Rights which includes copy right, patent, designs, integrated circuits, trade secrets, trade marks, traditional knowledge, plant varieties, bio-diversity, bio-technology and others. The site also gives information on seminars, training courses conducted by the centre.

## News Focus

In a colourful function organised at the High Court unit on 19.10.2000 Advocates Association, Bangalore, felicitated national award winner for playback singing and Shishunal Shariff award winner Shimoga Subbanna. Mr. Justice S. Rajendra Babu, Judge, Supreme Court of India and Mr. Justice Ashok Bhan, Acting Chief Justice of High Court of Karnataka were the chief guests at the function. Mr. K.L. Manjunath, President, AAB presided over the function.

## Notaries Association

In a circular dated 24.10.2000 Sri H.S. Renuka Prasad, President of the Association of Notaries of Karnataka, has notified that the notary fee has been enhanced so as to take effect from the date of publication of a notification in the official gazette. According to the provisions of the Notaries (Third Amendment) Rules, 2000 notaries can charge Rs. 15/- (Previously Rs. 10/-) for verifying, authenticating, certifying or attesting the execution of any instrument. Fee chargeable by the notaries inrespect of their other functions has also been substantially revised. For details refer to the Gazette of India, Extra Ordinary, Part II, pp. 3-5 or notification no. GSR 630 (E), dt. July 21, 2000 of Ministry of Law, Justice and Company Affairs (Dept. of Legal Affairs) GOI.

**Read Communique**

## The Hostage Crisis and the Surrender Syndrome

**From Page 3**

evidence appeared to be well founded. The Supreme Court ruled that the ultimate guiding consideration must always be the interest of the administration of justice. That is the touchstone on which the question must be determined. In the same judgement the Supreme Court took up another case. The prosecutor had said that the criminal incident was the outcome of labour trouble. It had since subsided. The occurrence had arisen out of labour union rivalry to sabotage a procession. The withdrawal would restore normalcy and help maintain cordial relationship. The withdrawal was declared to be proper. There was no question of surrender by the court to the prosecutor.

### Surrender of the Prosecutor to the Government

In Subash Chander Vs. State, A.I.R. 1980 S.C. 423, the question recurred. Hon'ble V.R. Krishna Iyer J. stated the law in his inimitable style. There was a burglary. During investigation, the valuables were searched and recovered from the accused. During trial, the prosecutor said that fresh investigation by a senior officer showed that the search and seizure were a frame up against the accused. He, therefore sought withdrawal. The complainant opposed it saying that the withdrawal was because of political influence. The court said:

"When a crime is committed in this country, the assessment of guilt and the award of punishment or, alternatively the discharge or acquittal of the accused are part of the criminal justice process administered by the courts of the land. It is not the function of the executive to administer criminal justice, and in our system judges are not fungible". (Fungible = of such a kind or nature that one specimen or part may be used in place of another).

The court further said: "The function of administering justice, under our constitutional order, belongs to those entrusted with judicial power. One of the few exceptions to the uninterrupted flow of the court's process is Section 321 Cr. P.C. But even here it is the Public Prosecutor, and not any executive authority, who is entrusted by the Code with the power to withdraw from a prosecution, and that also with the consent of the court. To interdict, intercept or jettison an enquiry or trial in a court, save in the manner and to the extent provided for in the Code itself, is lawlessness. The even course of criminal justice cannot be thwarted by the Executive, however high the accused, however sure a government feels a case is false, however unpalatable the continuance of the prosecution to the powers-that-be who wish to scuttle curt justice because of hubris, affection or other noble or ignoble consideration. Justicing, under our constitutional order, belongs to the judges....Public Prosecutor - not any executive authority - is entrusted by the code with a limited power to withdraw from a prosecution, with the court's consent where upon the case comes to a close. What the law had ignited, the law alone shall extinguish".

The court further highlighted the evil of the prosecutor surrendering before the government. It said:

"The jurisprudence of genuflexion is alien to our system and the law expects every repository of power to do his duty by the Constitution, and the laws regardless of commands, directives, threats and temptations. The Code is the master for the criminal process. Any authority who coerces or orders or pressures a functionary like a Public Prosecutor, in the exclusive province of his discretionary power, violates the rule of law and any Public Prosecutor who bends before such commands betrays the authority of his office".

Still, the court found that the Public Prosecutor had applied his mind to the disclosure emerging from the second enquiry. The recovery witness did not support the fact of recovery. One another witness was bed ridden at the time of the recovery and had later expired. Thus, the Public Prosecutor had made an independent decision on the material before him. He had not acted in blind compliance of the government's instructions. He had not surrendered to the Government.

**to be continued**

Published by : Lahari Advocates Forum, No. 2980, "Laxmideep", 17th Cross, K. R. Road, BSK II Stage, Bangalore-560 070 and Printed at : Parimala Mudranalaya, Mount Joy Extension, Hanumanthanagar, Bangalore-560 019. Phone : 6525516. Editor : K. Suryanarayana Rao

ಲಹರಿ ಸಂವಾದ

ಸಂಪುಟ ೧ | ಶಕೆ : ವಿಕ್ರಮನಾಮ ಸಂವತ್ಸರ ೧೯೨೩, ಮಾಸ : ಆಶ್ವಿಜ – ಕಾರ್ತಿಕ | ಸಂಚಿಕೆ ೭

## ತಿಳಿದಿರಲಿ

ಕರ್ಮಫಲವನ್ನು ಆಶ್ರಯಿಸದೆ ಮಾಡಬೇಕಾದ ಕರ್ಮವನ್ನು ಯಾವನು ಮಾಡುತ್ತಾನೆಯೋ ಅವನೇ ಸಂನ್ಯಾಸಿ ಮತ್ತು ಅವನೇ ಯೋಗಿ. ಅಗ್ನಿಯಿಲ್ಲದವನು (ಮಾತ್ರ ಸಂನ್ಯಾಸಿಯೆಂದೂ) ಕ್ರಿಯಾರಹಿತನಾಗಿರುವವನು (ಮಾತ್ರ ಯೋಗಿಯೆಂದೂ) ತಿಳಿಯಬಾರದು.

ಮನಸ್ಸನ್ನು ನಿಗ್ರಹಿಸದ ಯೋಗಿಯು ತನ್ನನ್ನು ಹೀಗೆ ಯಾವಾಗಲೂ ಯೋಗದಲ್ಲಿಟ್ಟು ಕೊಳ್ಳುತ್ತಾ, ನಿರ್ವಾಣ ಪರಮವಾದ ಶಾಂತಿಯನ್ನು ಹೊಂದುತ್ತಾನೆ.

ಕೃಪೆ : ಭಗವದ್ಗೀತಾ

## ಬಿನ್ನಹ

ನಮ್ಮ ಓದುಗರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ನಮ್ಮ ಹಿಂದಿನ ಸಂಚಿಕೆಗಳಲ್ಲಿ ಕಿರಿಯ ವಕೀಲ ಮಿತ್ರರಿಗಾಗಿ ಜನಸಾಮಾನ್ಯರಿಗಾಗಿ ನಮ್ಮ ಅನುಭವಿ ಪ್ರೊಫೆಸರ್‌ಗಳವರಿಂದ ಸಾಕಷ್ಟು ವಿಷಯಗಳ ಬಗ್ಗೆ ಕೃತಿ ರಚನೆಯಾಗಿದೆ. ಆದರೆ ಇದು ವರೆವಿಗೂ ನಾವು ಹಿಂದೆ ಹೇಳಿದ ರೀತಿಯಲ್ಲಿ ಯಾವ ವಿಷಯದ ಬಗ್ಗೆಯೂ ಪ್ರಶ್ನೆಗಳು ಬಂದಿಲ್ಲ. ನಿಮ್ಮ ಪ್ರಶ್ನೆಗಳಿಗೆ ಪುರಸ್ಕಾರವುಂಟು ಹಾಗೂ ಉತ್ತರವನ್ನು ಮುಂಬರುವ ಸಂಚಿಕೆಗಳಲ್ಲಿ ಕಾಣಬಹುದು. ಸಂವಾದ

## ಕೇಳೋ ಜಾಣ

ನಮ್ಮ ಸಿವಿಲ್ ಕೋರ್ಟ್‌ನ ಆವರಣ
ವಕೀಲರು, ಕಕ್ಷೀದಾರರಿಗಷ್ಟೇ ಅಲ್ಲ ಪ್ರಾಣ
ಅಲ್ಲಿ ಅಡಗಿದೆ ಸಹಸ್ರ ಪಶು, ಪಕ್ಷಿ ಪ್ರಾಣ
ಸುಮಾರು ವರ್ಷಗಳ ಹಿಂದೆ :
ಹಿಂಭಾಗದ ಆವರಣದಲ್ಲಿ ಓಡಾಡುತ್ತಿತ್ತು ಕುಂಟುಕತ್ತೆ
ಅದು, ಮರೆತೊಮ್ಮೆ ಕೋರ್ಟ್ ಹಾಲಿಗೆ ಬಂತಂತೆ
ನಗೆ ಚಟಾಕಿ ಹಾರಿಸಿದರಂತೆ ಅಲ್ಲಿದ್ದ ಹಿರಿಯ ವಕೀಲರು
"ಪಾಪ ! ಹಿಂದಿನ ಜನ್ಮದಲ್ಲಿ Defaulter ಆಗಿತ್ತು
ಸಾಲದ ಋಣವ ತೀರಿಸಲು ಈಗ ಕೋರ್ಟ್‌ಗೆ ಬಂದಿತ್ತು".
ಜಾಣನೇ ಕೇಳು :
ಮೂರನೇ ಮಹಡಿಯಿಂದ ಆರನೇ ಮಹಡಿಯು
ನೂರಾರು ಪಾರಿವಾಳಗಳ ಬೀಡು
ಕೇಸನೇ ಮರೆತು, ಅದ ನೋಡಿ ನಲಿವುದು ವಕೀಲರ ದಂಡು
ಏನಚ್ಚರಿ ! ಕಾಂಕ್ರೀಟ್ ಕಟ್ಟಡದೆ ಹೇಗೆ
ವಾಸ ಮಾಡುತಿದೆ ಪಾರಿವಾಳ
ಕೋರ್ಟ್ ಗಾಳಿ ತಗುಲಿ ಅದು ಪ್ರಿಯನೊಡನೆ
ಜಾಗಕಾಗಿ ಆಡುತ್ತಿತ್ತು ಜಗಳ
ಗೆಳೆಯನೇ ನೋಡು :
ಏಳನೇ ಮಹಡಿಯಲಿ ಕಟ್ಟಿದೆ ಜೇನುಗೂಡು
ಕೋರ್ಟಿನ ಮುಖ್ಯದ್ವಾರವೇ ಹಸಿರ ರಾಜಿಯ ಬೀಡು
ಇಷ್ಟೆಲ್ಲ ವೈವಿಧ್ಯಗಳೊಡನೆ ಸಾಗುತಿದೆ ಸಿವಿಲ್ ಕೋರ್ಟು
ಇವಕೆ ಕೀರ್ತಿ ಕಲಶವಿಟ್ಟಂತೆ ಅಲ್ಲವೆ ನಮ್ಮ 'ಕರಿ ಕೋಟು'

ಕೆ. ವಿದ್ಯಾ

## ನಾ ಕಂಡ ಒಂದು ಸನ್ಮಾನ ಸಮಾರಂಭ

ವಿ. ಎನ್. ಮೂರ್ತಿ

ಅಂದು ಗುರುವಾರ ತಾ. ೧೯.೧೦.೨೦೦೦, ಮಧ್ಯಾಹ್ನ ಮೂರು ಘಂಟೆಗೆ ನಮ್ಮ ಗುರುಗಳಾದ ಶ್ರೀಮಾನ್ ಹೆಚ್. ಬಿಲ್ಲಪ್ಪನವರು ನಮ್ಮ ವಕೀಲರ ಸಂಘದ ಹವಾನಿಯಂತ್ರಿತ ಲೈಬ್ರರಿಯಲ್ಲಿ ತಮ್ಮ ಸಹೋದ್ಯೋಗಿಯೊಂದಿಗೆ ಉಚ್ಚ ನ್ಯಾಯಾಲಯಕ್ಕೆ ಒಂದು ಸಿ.ಆರ್.ಪಿ. ಹಾಕಬೇಕೆಂದು ತಯಾರು ಮಾಡುತ್ತಿದ್ದರು. ನಾನು ನನ್ನ ಮೇಧಾವತ್ವವನ್ನು ತೋರಿಸಿಕೊಳ್ಳುವ ಉದ್ದೇಶದಿಂದ ಪ್ರತಿದಿನ ಗ್ರಂಥಾಲಯಗಳಲ್ಲಿ ಓಡಾಡುವ ವಾಡಿಕೆಯನ್ನು ಇಟ್ಟುಕೊಂಡಿದ್ದೆ. ಅದರಂತೆಯೇ ನಾನು ಆ ದಿನ ಗ್ರಂಥಾಲಯದೊಳಕ್ಕೆ ಹೋದಾಗ ಅವರನ್ನು ಕಂಡ ತಕ್ಷಣ 'ನಮಸ್ಕಾರ ಸ್ವಾಮಿ' ಎಂದೆ. ಅವರು 'ಊ' ಎಂದರು. ನಂತರ ಸುಮ್ಮನಿರದ ನನ್ನ ಬಾಯಿ ಅವರ ಕೆಲಸದ ತಲ್ಲೀನತೆಯನ್ನು ಕೆಡಿಸುವ ರೀತಿಯಲ್ಲಿ "ತಾವು ಏನೋ ಉಚ್ಚ ನ್ಯಾಯಾಲಯದಲ್ಲಿ ಕೇಸ್ ಫೈಲ್ ಮಾಡುವುದಕ್ಕಾಗಿ ಹೊಲೀತಾ ಇದ್ದಹಾಗೆ ಇದೆಯಲ್ಲಾ?" ಎಂದು ಪ್ರಶ್ನೆಮಾಡಿದ ರೀತಿಯಲ್ಲಿ ಅವರನ್ನು ಕೇಳಿದಾಗ ಅವರು ನನ್ನ ಮುಖವನ್ನು ನೋಡಿ ನಸುನಕ್ಕರು. ಅದರ ಅರ್ಥ ನನಗೆ ಮಾತ್ರ ಅರ್ಥವಾಗಿ ನನ್ನ ತಪ್ಪನ್ನು ತಿಳಿದಂಥವನಾಗಿ ಸುಮ್ಮನಾದೆ. ಆ ತಪ್ಪು ಏನು ಅಂತೀರಾ? ಸಿನಿಮಾದಲ್ಲಿ ತನ್ನೊಡನೆ ಪಕ್ಕದಲ್ಲಿ ಕುಳಿತಿದ್ದ ಸ್ನೇಹಿತನನ್ನು ಕಂಡು "ನೀವು ಸಿನಿಮಾ ನೋಡೋದಿಕ್ಕೆ ಬಂದ್ರಾ" ಅಂದ ಹಾಗೆ ಇತ್ತು. ಹೇಗೋ ಅದಕ್ಕೆ ಪ್ರತಿಯಾಗಿ ಇನ್ನೊಂದು ಮಾತನ್ನಾಡೋ ಅಥವಾ ಕೆಲಸವನ್ನು ಮಾಡೋ ಅವರ ಗಮನ ನನ್ನ ಕಡೆ ಸೆಳೆಯಬೇಕೆಂಬ ಉದ್ದೇಶದಿಂದ, "ಸಾರ್ ನಾನು ಉಚ್ಚ ನ್ಯಾಯಾಲಯಕ್ಕೆ ಹೋಗುತ್ತಿದ್ದೇನೆ, ನೀವು ಬರ್ತೀರಾ?" ಅಂದೆ. ಅದಕ್ಕೆ ಅವರು "ಉಚ್ಚ ನ್ಯಾಯಾಲಯಕ್ಕೆ ಸಿ.ಆರ್.ಪಿ. ಫೈಲ್ ಮಾಡೋಕ್ಕಾಗೆ ತಯಾರು ಮಾಡ್ತಾಯಿದ್ದೀನಿ ಆದರೆ ಅಲ್ಲಿಗೆ ನಮ್ಮ ಹುಡುಗರು ಹೋಗಿ ಫೈಲ್ ಮಾಡ್ತಾರೆ" ಅಂದ್ರು. ಆ ಮಾತನಾಡುವಾಗ ಅವರ ಮುಖಚರ್ಯೆ ತಲೆ ಕೆಡಿಸುವ ವ್ಯಕ್ತಿಗಳಿಂದ ಯಾವಾಗ ದೂರ ಆಗುವೆನೋ ಎಂಬುವಂತಿತ್ತು. ಸ್ವಲ್ಪ ಹೊತ್ತು ಅಲ್ಲಿಯೇ ಇದ್ದ ಯಾವುದೋ ಒಂದು ಪುಸ್ತಕವನ್ನು ತೆಗೆದೆ. ಮೂರು ನಾಲ್ಕು ಸಾಲು ಓದಿರಬಹುದು, ತಕ್ಷಣವೇ ನನ್ನ ಕಪಿಚಿತ್ತ ಮನಸ್ಸು ಬೇರೆಯವರ ಏಕಾಗ್ರತೆಯನ್ನು ಕದಡುವ ಕಾತುರದಿಂದ ಅಲ್ಲಿಯೇ ಹತ್ತಿರದಲ್ಲಿ ಕುಳಿತಿದ್ದ, ಮಿತಮಾತಿನ ಕೆಲಸಗಾರರಾದ ನಮ್ಮ ಗುರುಗಳನ್ನು "ಏನ್ ಸಾರ್, ನೀವೇ ಹೋಗ್ತೀರಾ" ಎಂದು ಮರುಪ್ರಶ್ನೆ ಮಾಡುವ ಮನಸಾಯಿತು. ತಕ್ಷಣವೇ ನನಗೆ ಅರಿವಿಲ್ಲದಂತೆಯೇ ನಾನು ನಮ್ಮ ಗುರುಗಳನ್ನು "ಸರ್ ಹೈಕೋರ್ಟಿಗೆ ಹೊರಡುತ್ತಾ ಇದ್ದೀನಿ. ನೀವೂ ಹೊರಡುತ್ತೀರ?" ಎಂದೆ. ಆಗ ಇನ್ನೂ ಅವರ ಕೆಲಸ ಮುಗಿದಿರಲಿಲ್ಲ, ಅವರು ಸುಮ್ಮನೆ ಇದ್ದರೂ ಒಂದು ಕ್ಷಣ ನನ್ನ ಮುಖ ನೋಡಿ, ಅವರ ಕೈನಲ್ಲಿ ಇದ್ದ ದಾರ ಮತ್ತು ಪೇಪರ್ ಅನ್ನು ನೋಡಿದರು. ತಕ್ಷಣಾನೇ "ನೋಡಿ ಕೆಲವರ ಜೀವನ ಈ ತರಹ" ಎಂದರು. "ಬಾಳು, ಇಲ್ಲವೆ ಬಾಳಲು ಬಿಡು" ಎಂಬುವ ಮಾತು ನನ್ನ ಮುಖಕ್ಕೆ ರಪ್ ಎಂದು ಹೊಡೆಯುವ ರೀತಿ ಇತ್ತು. ಆ ಮಾತಿನಿಂದ ಚೇತರಿಸಿಕೊಂಡವನೇ "ಸರ್ ಹೊಲಿದಿದ್ದೆಲ್ಲಾ ಆಗಿದ್ದರೆ ಸ್ಟ್ಯಾಂಪ್ ಹಾಕಿಸ್ಲಾ" ಎಂದೆ. ಹೌದು ಹಾಕಿಸ್ಬೇಕು ಎಂದು ಮತ್ತೆ ಕೆಲಸ ಮಾಡತೊಡಗಿದರು. ಅವರೆಲ್ಲಾ ಕೆಲಸಗಳನ್ನು ಮುಗಿಸಿ ಅವರ ಸಹೋದ್ಯೋಗಿಗೆ ಅದನ್ನು ಹೊಲಿಯಲು ಕೊಟ್ಟರು. ತಕ್ಷಣ ಆ ಹುಡುಗ ಅದನ್ನು ಮಾಡಲನುವಾದ. ಆ ಕ್ಷಣದಲ್ಲಿ ನಾನು ಎಂಬ ಅಹಂ ನನ್ನಲ್ಲಿ ಆವರಿಸಿ, ಎಲ್ಲಾ ತಿಳಿದವನಂತೆ ಆ ಹುಡುಗು ಜೋಡಿಸಿದ ಪೇಪರ್ ಅನ್ನು ಮತ್ತೆ ಜೋಡಿಸಿ "ನಾನು ಹೊಲೀತೀನಿ" ಎಂದೆ. ಆ ಹುಡುಗನ ಮನಸ್ಸಿನಲ್ಲಿ ಈ ವ್ಯಕ್ತಿ ನನಗಿಂತಾ ಸೀನಿಯರ್ (ಕೂದಲು ಬೆಳ್ಳಗಾಗಿವೆ), ಇವರು ಮಾಡುವ ಕೆಲಸದಲ್ಲಿ ಒಳ್ಳೆಯ ರೀತಿ ಇರುತ್ತೆ ಎಂಬಂತೆ ಭಾವಿಸಿ ನನಗೆ ಅದನ್ನು ಒಪ್ಪಿಸಿದ. ಅದನ್ನು ತೆಗೆದುಕೊಂಡು ನನ್ನ ಮನಬಂದಂತೆ ಹೊಲಿಗೆ ಹಾಕಿದೆ.

೨ನೇ ಪುಟ ನೋಡಿ

## ಪಾಲುದಾರಿಕೆ

ಪ್ರೊ. ಜಗದೀಶ ಮುಂಡರಗಿ, ವಕೀಲರು

ಹಿಂದಿನ ಸಂಚಿಕೆಯಿಂದ

ಜಂಟಿ ಮಾಲೀಕರು , ತಮ್ಮ ಆಸ್ತಿಯನ್ನು ತಮ್ಮ ಅನುಕೂಲಕ್ಕಾಗಿ, ಅದನ್ನು ಅಭಿವೃದ್ಧಿಗೊಳಿಸಿ, ಉಪಯೋಗಕ್ಕಾಗಿ ಅಥವಾ ಬಾಡಿಗೆ ಕೊಟ್ಟಾಕ್ಷಣ, ಅವರು ಪಾಲುದಾರರಾಗುವುದಿಲ್ಲ. ಇದನ್ನು ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ಈ ಉದಾಹರಣೆ ನೋಡಬಹುದು. ಸುಂದರ್ ಮತ್ತು ಮೋಹನ್ ತಮ್ಮ ಜಂಟಿ ಖಾತೆಗೆ ವ್ಯಾವಹಾರಕ್ಕೆಂದು ಒಪ್ಪಿಕೊಂಡು ೧೦೦ ಬೇಲ್ ಅರಳೆಯನ್ನು ಕಂಡುಕೊಂಡರೆ, ಆ ರೀತಿ ಕೊಂಡುಕೊಂಡ ಅರಳೆಗೆ ಸಂಬಂಧಪಟ್ಟಂತೆ ಸುಂದರ್ ಮತ್ತು ಮೋಹನ್ ಪಾಲುದಾರರಾಗುತ್ತಾರೆ. ಆದರೆ ಅದೇ ವ್ಯಕ್ತಿಗಳು ೧೦೦ ಬೇಲ್ ಅರಳೆಯನ್ನು ತಮ್ಮಿಬ್ಬರಲ್ಲೆ ಹಂಚಿಕೊಳ್ಳುವುದಕ್ಕೋಸ್ಕರ ಒಪ್ಪಂದ ಮಾಡಿಕೊಂಡು ಕೊಂಡುಕೊಂಡರೆ, ಅವರು ಪಾಲುದಾರರಾಗುವುದಿಲ್ಲ.

ನಾವು, ಒಂದು ವ್ಯವಹಾರ ಪಾಲುದಾರಿಕೆಯಾಗುತ್ತದೋ ಇಲ್ಲವೋ, ಅದರಲ್ಲಿ ತೊಡಗಿಸಿಕೊಂಡಂತಹ ವ್ಯಕ್ತಿಗಳು ಪಾಲುದಾರ ರಾಗುತ್ತಾರೋ ಇಲ್ಲವೋ ಎಂಬುದನ್ನು ಅರಿತುಕೊಳ್ಳಲು ಕಲಂ ೪ರಿಂದ ೬ನ್ನು ನೋಡಬೇಕಾಗುತ್ತದೆ.

'ಪಾಲುದಾರಿಕೆ' ಎಂದರೆ ಕಲಂ ೪ರ ಪ್ರಕಾರ ಕೆಲವರು, ಒಂದು ವ್ಯವಹಾರವನ್ನು ತಾವುಗಳೆಲ್ಲರೂ ಅಥವಾ ತಮ್ಮೆಲ್ಲರ ಪರವಾಗಿ ಯಾರಾದರೊಬ್ಬರು ನಡೆಸಿಕೊಂಡು ಹೋಗುತ್ತಿದ್ದು, ಅಥವಾ ನಡೆಸಿಕೊಂಡು ಹೋಗಲು ಒಪ್ಪಿದ್ದು, ಅಂಥಹ ವ್ಯಾಪಾರದಲ್ಲಿ ಬರತಕ್ಕಂತಹ ಲಾಭವನ್ನು ಹಂಚಿಕೊಳ್ಳಲು ಒಪ್ಪಿಕೊಂಡಿದ್ದು, ಅಂತಹವರ ಮಧ್ಯ ಇರುವ ಸಂಬಂಧ ಈ ತರಹದ ಪಾಲುದಾರಿಕೆಯಲ್ಲಿ ಭಾಗಿಯಾದ ಪ್ರತಿಯೊಬ್ಬರನ್ನು 'ಪಾಲುದಾರರು' ಎಂದು ಕರೆಯಲಾಗುತ್ತದೆ. ಎಲ್ಲರನ್ನೂ ಒಟ್ಟಾಗಿ 'ಪಾಲುದಾರಿಕೆ ಸಂಸ್ಥೆ' ಎಂದು ಕರೆಯಲಾಗುತ್ತದೆ.

ಒಂದು ವ್ಯವಹಾರ ಪಾಲುದಾರಿಕೆಯಾಗಬೇಕಾದರೆ ಅದರಲ್ಲಿ ಈ ಕೆಳಗಿನ ಅಂಶಗಳು ಇರಬೇಕು.

೧. ಸಂಬಂಧ ಪಟ್ಟಂತಹ ಎಲ್ಲಾ ವ್ಯಕ್ತಿಗಳ ಮಧ್ಯೆ ಒಂದು ಒಪ್ಪಂದವಿರಬೇಕು.

೨. ಅಂತಹ ಒಪ್ಪಂದವನ್ನು, ಒಂದು ವ್ಯವಹಾರದಲ್ಲಿನ ಲಾಭ ಹಂಚಿಕೆಗಾಗಿ ಮಾಡಿಕೊಂಡಿರಬೇಕು.

೩. ಆ ವ್ಯವಹಾರವನ್ನು ಅವರೆಲ್ಲರೂ ಅಥವಾ ಎಲ್ಲರ ಪರವಾಗಿ ಯಾರಾದರೊಬ್ಬರು ನಡೆಸಿಕೊಂಡು ಹೋಗುವಂತಿರಬೇಕು.

ಪಾಲುದಾರಿಕೆ ಅಧಿನಿಯಮದ ಕಲಂಗಳಿಗೆ ಅನುಗುಣ ವಾಗಿರುವ, ರದ್ದಾಗದೆ ಇರುವ ಭಾರತೀಯ ಒಪ್ಪಂದ ಅಧಿನಿಯಮದ ಕಲಂಗಳು, ಪಾಲುದಾರಿಕೆ ಸಂಸ್ಥೆಗಳಿಗೆ ಅನ್ವಯಿಸುತ್ತವೆ. ಆದ್ದರಿಂದ ಒಂದು ಪಾಲುದಾರಿಕೆ ಒಪ್ಪಂದವು ಭಾರತೀಯ ಒಪ್ಪಂದ ಅಧಿನಿಯಮದ ಕಲಂಗಳಿಗೆ ಅನುಗುಣವಾಗಿರಬೇಕು. ಅಂತಹ ಒಪ್ಪಂದ ಕಾನೂನು ಬಾಹಿರವಾಗಿರಬಾರದು. ಒಪ್ಪಂದವು ಬರವಣಿಗೆ ಯಲ್ಲಿಯೇ ಇರಬೇಕಾದ್ದಿಲ್ಲ. ( ಎ.ಐ.ಆರ್. ೧೯೫೭ (ಮದ್ರಾಸ್) ೬೩ (೧೧) ಮತ್ತು ಎ.ಐ.ಆರ್. ೧೯೫೪ (ಮೈಸೂರು) ೩೩(೩೫) ಪಾಲುದಾರಿಕೆ ಒಪ್ಪಂದವನ್ನು ಪತ್ರದ ಮೂಲಕ ಮಾಡಿಕೊಂಡರೆ, ಅದು ಮುದ್ರಾಂಶ ಹಾಳೆ. (ಸ್ಟಾಂಪ್ ಪೇಪರ್) ಮೇಲೆ ಮಾಡಬೇಕು. ಪಾಲುದಾರಿಕೆಯ ಬಂಡವಾಳ ರೂ. ೫೦೦೦/– (ಐದು ಸಾವಿರ ರೂಪಾಯಿಗಳು) ಗಿಂತ ಕಡಿಮೆ ಇದ್ದರೆ ರೂ. ೧೦೦ (ಒಂದು ನೂರು ರೂಪಾಯಿ) ಬೇರೆ ಸಂದರ್ಭಗಳಲ್ಲಿ ರೂ. ೫೦೦/– (ಐದು ನೂರು ರೂಪಾಯಿ)ಯ ಮುದ್ರಾಂಶ ಹಾಳೆ (ಸ್ಟ್ಯಾಂಪ್ ಪೇಪರ್)ಯ ಮೇಲೆ ಮಾಡಬೇಕು.

ಹಾಗೆಯೆ ಪಾಲುದಾರಿಕೆಯನ್ನು ಪುನರ್ರಚಿಸಿ ಪತ್ರ ಮಾಡಿಕೊಂಡರೆ

೨ನೇ ಪುಟ ನೋಡಿ

## ನಾ ಕಂಡ ಒಂದು....

1ನೇ ಪುಟದಿಂದ

ಅಷ್ಟು ಹೊತ್ತಿಗೆ ಅವರ ಸಹೋದ್ಯೋಗಿ ಅಲ್ಲಿಂದ ಹೊರಗೆ ಹೊರಟು ಹೋಗಿದ್ದ. ಆ ಹೊಲಿದ ಪೇಪರುಗಳು ಮತ್ತೆ ಗುರುಗಳ ಕೈ ಸೇರಿತು. ತಕ್ಷಣಾ ಅವರು ಹಿಂದೇ ಮುಂದೇ ನೋಡಿ ದಾರವನ್ನು ಕತ್ತರಿಸಲು ನೋಡಿದರು. ನಾನು ''ಸಾರ್, ಯಾಕೆ ಏನಾಗಿದೆ ? ಸ್ವಲ್ಪ ಸಡಿಲವಾಗಿ ಹೊಲಿದಿದ್ದೇನೆ ಅಷ್ಟೇ'' ಎಂದೆ. ಅದಕ್ಕೆ ಅವರಿಂದ ಬಂದ ಉತ್ತರ ''ನೀವು ಸರಿಯಾಗೇ ಹೊಲಿದಿದ್ದೀರಾ, ಆದರೆ ಅದಕ್ಕೆ ಸ್ವಲ್ಪ ಶೃಂಗಾರ ಮಾಡಬೇಕಾಗಿದೆ'' ಎಂದರು. ತಕ್ಷಣಾ ನನಗೆ ಅರ್ಥವಾಯಿತು. ನಾನು ಮಾಡಿರುವ ಕೆಲಸ ಸಂಪೂರ್ಣವಾಗಿಲ್ಲ ಹಾಗೂ ನಾವು ಮಾಡುವ ಕೆಲಸ ತಿಳಿದು, ಕಲಿತು, ಬೇರೆಯವರು ಒಪ್ಪುವ ರೀತಿಯಲ್ಲಿ ಇರಬೇಕೆಂದು. ಕೊನೆಗೇ ಆ ಕೆಲಸದಲ್ಲಿ ನನಗೆ ಅವಮಾನ ಆದಂತಾಯಿತು. ನನ್ನ ಮನಸ್ಸಿನಲ್ಲಿ ನಮ್ಮ ಗುರುಗಳಿಗೆ ನನ್ನ ಮೇಲೆ ಪಿತ್ತ ನೆತ್ತಿಗೇರುವಷ್ಟು ಕೋಪ ಬಂದಿರಬಹುದೆಂಬ ಭಾವನೆ ಹಾಗೂ ನನ್ನ ಜೊತೆಯಲ್ಲಿ ಉಚ್ಚ ನ್ಯಾಯಾಲಯಕ್ಕೆ ಬರುವುದೇ ಇಲ್ಲವೆಂಬ

ಮುಂದುವರೆಯುವುದು

### ಅನುವಾದ ಕೈಪಿಡಿ

ಪರಿಕಲ್ಪನೆ ಮತ್ತು ಸಂಗ್ರಹ :
**ಕೆ. ಸೂರ್ಯನಾರಾಯಣರಾವ್**

| | | |
|---|---|---|
| Award | : | ಐ ತೀರ್ಪು; |
| Self redeeming mortgage | : | ಇಳು ಭೋಗ್ಯ; |
| Culpable | : | ಅಪಾದನೀಯ; |
| Procedure | : | ಪ್ರಕ್ರಿಯೆ; |
| Code | : | ಸಂಹಿತೆ ; |
| Burns | : | ಸುಟ್ಟಗಾಯ ; |
| Contusion | : | ಕಂದುಗಾಯ (ಬಾಸುಂಡೆ); |
| Scratches | : | ಗೀಚುಗಳು ; |
| Stab wound | : | ಇರಿದ ಗಾಯ; |
| Abrasion | : | ತರಚುಗಾಯ (ಉಜ್ಜು ಗಾಯ). |

## ಪಾಲುದಾರಿಕೆ

1ನೇ ಪುಟದಿಂದ

ಅದನ್ನು ಸ್ಟ್ಯಾಂಪ್ ಪೇಪರ್ ಮೇಲೆ ಮಾಡಿಕೊಳ್ಳಬೇಕು. ಅಂತಹ ಸಂದರ್ಭಗಳಲ್ಲಿ ''ಒಬ್ಬ ಪಾಲುದಾರ ಅಥವಾ ಪಾಲುದಾರರು ತನ್ನ ಭಾಗವಾಗಿ ಯಾವುದಾದರೂ ಸ್ಥಿರ ಆಸ್ತಿಯನ್ನು ತಂದಿದ್ದು ಅವರು ಪಾಲುದಾರಿಕೆಯಿಂದ ಹೊರಹೋಗುತ್ತಿದ್ದು ಆ ಸ್ಥಿರ ಆಸ್ತಿಯು ಸಂಸ್ಥೆಯಲ್ಲಿಯೇ ಉಳಿದರೆ, ಅವರ ಮಾರುಕಟ್ಟೆಯ ಬೆಲೆಯ ಮೇಲೆ ಕರ್ನಾಟಕ ಮುದ್ರಾಂಕ ತುಲ್ಯಕಾಯ್ದೆ ಆರ್ಟಿಕಲ್ ೨೧ರ ಪ್ರಕಾರ ಸ್ಟ್ಯಾಂಪ್ ಪೇಪರ್ ಉಪಯೋಗಿಸಬೇಕು. ಇತರೆ ಸಂದರ್ಭಗಳಲ್ಲಿ ರೂ. ೫೦೦/– (ಐದು ನೂರು ರೂಪಾಯಿ) ಸ್ಟ್ಯಾಂಪ್ ಪೇಪರ್ ಉಪಯೋಗಿಸಬೇಕಾಗುತ್ತದೆ. ಅದೇ ರೀತಿ ಪಾಲುದಾರಿಕೆಯನ್ನು ವಿಸರ್ಜಿಸುವಾಗ ಒಬ್ಬ ಪಾಲುದಾರ ಅಥವಾ ಪಾಲುದಾರರು ತಂದಂತಹ ಸ್ವತ್ತನ್ನು ಇನ್ನೊಬ್ಬ ಪಾಲುದಾರನಿಗೆ ಅಥವಾ ಪಾಲುದಾರರಿಗೆ ಕೊಟ್ಟಲ್ಲಿ, ಅದರ ಮಾರುಕಟ್ಟೆ ಬೆಲೆಯ ಮೇಲೆ ಕರ್ನಾಟಕ ಮುದ್ರಾಂಕ ಶುಲ್ಕ ಕಾಯ್ದೆಯ ಆರ್ಟಿಕಲ್ ೨೦ರ ಪ್ರಕಾರ ಸ್ಟ್ಯಾಂಪ್ ಪೇಪರ್ ಉಪಯೋಗಿಸಬೇಕು. ಇತರೆ ಸಂದರ್ಭಗಳಲ್ಲಿ ರೂ. ೫೦೦/– (ಐದು ನೂರು ರೂಪಾಯಿ) ಸ್ಟ್ಯಾಂಪ್‌ಪೇಪರ್ ಉಪಯೋಗಿಸಬೇಕು.

<u>ವ್ಯಕ್ತಿ ವಿಶೇಷ</u>

## ಸರ್. ಎಂ. ವಿಶ್ವೇಶ್ವರಯ್ಯ

೧೯೧೨ರಲ್ಲಿ ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ದಿವಾನರಾಗುವ ಹೊತ್ತಿಗೆ ಆಗಾಗಲೇ ಮುಂಬಯಿ ಸರ್ಕಾರದ ಸೇವೆಯಲ್ಲಿ ೨೫ ವರ್ಷಗಳನ್ನು ಮುಗಿಸಿದ್ದು ೧೯೦೯ರಲ್ಲಿ ಮೈಸೂರಿನ ಮುಖ್ಯ ಇಂಜಿನಿಯರ್ ಆಗಿ ಮೂರು ವರ್ಷಗಳ ಸೇವೆ ಸಲ್ಲಿಸಿದ್ದರು. ೧೯೧೩ರಲ್ಲಿ ಭಾರತದ ವೈಸ್‌ರಾಯ್ ಆಗಿದ್ದ ಲಾರ್ಡ್ ಹಾರ್ಡಿಂಜ್, ಕೇಂದ್ರ ಸರ್ಕಾರದ ಹಸ್ತಕ್ಷೇಪವು ರಾಜ್ಯಾಡಳಿತದ ಪ್ರಗತಿಗೆ ತೊಡಕಾಗುತ್ತಿದ್ದ ಸ್ಥಿತಿಯನ್ನು ಬದಲಿಸಿದ್ದು ಆ ಕಾಲವು ಮಹಾಯುದ್ಧದ ನೆರಳಿನ ಭೀಕರ ದಿನಗಳಾಗಿದ್ದಾಗ್ಯೂ ಮೈಸೂರಿನ ಜನತೆಯ ಪಾಲಿಗೆ ಪ್ರಗತಿಯ ಕಾಲವಾಗಿ ಪರಿಣಮಿಸಿತು. ಪ್ರತಿಭಾಶಾಲಿ ವಿಶ್ವೇಶ್ವರಯ್ಯನವರು ಪ್ರಗತಿಯ ಯೋಜನೆಗಳೆಡೆಗೆ ಧಾರಾಳ ಭಾವ ಹೊಂದಿದ್ದು ಎಲ್ಲ ತಾಂತ್ರಿಕ ಬೆಳವಣಿಗೆಗಳಿಗೆ ಪ್ರಾಮುಖ್ಯತೆ ನೀಡಿದರು. ಸ್ಥಗಿತಗೊಂಡಿದ್ದ ರೈಲ್ವೆ ನಿರ್ಮಾಣ ಕಾರ್ಯಗಳು ಮಿಂಚಿನ ವೇಗದಲ್ಲಿ ಆರಂಭಗೊಂಡು ಹಲವಾರು ಹೊಸ ರೈಲು ಮಾರ್ಗಗಳಿಗೆ ದಾರಿಯಾಯಿತಲ್ಲದೆ ೧೯೧೮ರಲ್ಲಿ ಮೈಸೂರು–ಅರಸೀಕೆರೆ ಮಾರ್ಗ ಹಾಗೂ ಯಲಹಂಕದಿಂದ ದೇವನಹಳ್ಳಿ, ಚಿಕ್ಕಬಳ್ಳಾಪುರ, ಬಂಗಾರಪೇಟೆಗಳವರೆಗಿನ ಮಾರ್ಗಗಳು ಸಿದ್ಧಗೊಂಡು ಬಿಟ್ಟಿತು.

ವಿಶ್ವೇಶ್ವರಯ್ಯನವರ ಕಾಲವೆಂದರೆ ರಾಜ್ಯದ ಕೈಗಾರಿಕಾ ಪ್ರಗತಿಯ ಉನ್ನತ ಕಾಲವೇ ಆಗಿತ್ತೆನ್ನಬಹುದು. ಅವರ 'ಸೃಷ್ಟಿ' ಕನ್ನಂಬಾಡಿ ಕಟ್ಟೆಯ ನಿರ್ಮಾಣ ಕಾರ್ಯದಿಂದಾಗಿ ಒಮ್ಮೆಗೇ೧೨,೪೦,೦೦೦ ಎಕರೆಗಳಷ್ಟಿನ ವ್ಯವಸಾಯ ಭೂಮಿಗಳು ಕಾವೇರಿ ನೀರಿನ ಬಳಕೆಯನ್ನು ಪಡೆದವು. ಆರ್ಥಿಕ ಪ್ರಗತಿಯಲ್ಲಿ ಸಾಮಾನ್ಯರ ಪಾತ್ರವೂ ಇರಬೇಕೆನ್ನುವ ಧೋರಣೆಯಲ್ಲಿ ಇವರು ನಡೆಸಿದ ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದ ಸಮ್ಮೇಳನಗಳು ಅತ್ಯಂತ ನವೀನ ರೀತಿಯವು ಎನಿಸಿ ಯಶಸ್ವಿಯಾದವು. ೧೯೧೬ರಲ್ಲಿ ಕೈಗಾರಿಕಾ ಸ್ಥಾಪನೆಗೆ ವ್ಯವಸ್ಥಿತ ನೆರವು ದೊರಕಲೆಂದು ಮೈಸೂರು ಬ್ಯಾಂಕ್ ಸ್ಥಾಪಿಸಿದರು. ಅದೇ ಕಾಲಕ್ಕೆ ಆರಂಭವಾದ ಕೈಗಾರಿಕೆಗಳೆಂದರೆ ೧. ಗಂಧದೆಣ್ಣೆಯ ಕಾರ್ಖಾನೆ ೨. ಗಂಧದ ಸಾಬೂನು ಕಾರ್ಖಾನೆ ೩. ಲೋಹ ಕೈಗಾರಿಕೆ ೪. ಕ್ರೋಮ್ ಟ್ಯಾನಿಂಗ್ ಕೈಗಾರಿಕೆ ೫. ಕೇಂದ್ರೀಯ ಕೈಗಾರಿಕಾ ತರಬೇತಿ ಶಾಲೆ ಹಾಗೂ ೬. ಭದ್ರಾವತಿಯ ಉಕ್ಕು ಕಾರ್ಖಾನೆ ಹಾಗೂ ಮರದ ಡಿಸ್ಟಿಲರಿಗಳು. ಮೈಸೂರು ವಾಣಿಜ್ಯ ಕೇಂದ್ರ (Mysore Chamber of Commerce) ಕೂಡ ೧೯೧೬ರಲ್ಲಿ ಸ್ಥಾಪಿತವಾಯಿತು.

ವಿದ್ಯೆಗೆ ಸಂಬಂಧಿಸಿದಂತೆಯೂ ವಿಶ್ವೇಶ್ವರಯ್ಯನವರು ಹಲವಾರು ಪ್ರಗತಿಶೀಲ ಕಾರ್ಯಗಳನ್ನು ಕೈಗೊಂಡರು ಎನ್ನುವುದಕ್ಕೆ ಅವರು ಮಂಡಿಸಿದ ಕಡ್ಡಾಯ ಶಿಕ್ಷಣ ಮಸೂದೆಯೊಂದೇ ಸಾಕು. ಹೆಣ್ಣು ಮಕ್ಕಳಿಗೆ ಹೆಚ್ಚಿನ ವಿದ್ಯಾಸೌಕರ್ಯ, ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿಶೇಷ ಆರ್ಥಿಕ ನೆರವು (Scholor ship)ಗಳನ್ನು ಜಾರಿಗೆ ತಂದ ದಿವಾನ್ ವಿಶ್ವೇಶ್ವರಯ್ಯನವರು ತಾಂತ್ರಿಕ, ವಾಣಿಜ್ಯ ಹಾಗೂ ವ್ಯವಸಾಯ ವಿದ್ಯಾಶಾಲೆಗಳನ್ನು ಕೂಡಲೇ ತೆರೆದಿದ್ದರು. ಜಿಲ್ಲಾ ಕೇಂದ್ರಗಳಲ್ಲಿ ಕೈಗಾರಿಕಾ ಹಾಗೂ ತಾಂತ್ರಿಕ ಶಿಕ್ಷಣ ಶಾಲೆಗಳನ್ನು ಸ್ಥಾಪಿಸಿದ್ದಲ್ಲದೆ ಮೈಸೂರಿನಲ್ಲಿ ಚಾಮರಾಜೇಂದ್ರ ತಾಂತ್ರಿಕ ಶಾಲೆಯೂ ಸ್ಥಾಪಿತ ವಾಯಿತು. ೧೯೧೬ರಲ್ಲಿ ಮೈಸೂರು ವಿಶ್ವವಿದ್ಯಾಲಯವು ಜನಿಸಿತು. ತನ್ನ ಚಾನ್ಸಲರ್ (ಕುಲಪತಿ)ಯಾಗಿ ಮಹಾರಾಜರನ್ನು ನೇಮಿಸಿಕೊಂಡಿತು. ಇದೇ ಸಂದರ್ಭದಲ್ಲಿ ಮಹಾರಾಜರು ಬನಾರಸ್ ವಿಶ್ವವಿದ್ಯಾನಿಲಯಕ್ಕೆ ಎರಡು ಲಕ್ಷರೂಗಳ ಉದಾರ ದಾನವನ್ನು ಮಾಡಿದರೆನ್ನುವುದು ಗಮನಾರ್ಹ ಅಂಶ. ವಿಶ್ವೇಶ್ವರಯ್ಯನವರು ಇಷ್ಟೇ ಅಲ್ಲದೆ ಪರೋಕ್ಷ ವಾಗಿ ಕನ್ನಡ ಸಾಹಿತ್ಯ ಪರಿಷತ್; ಸೆಂಚುರಿ ಕ್ಲಬ್, ಬೆಂಗಳೂರು; ಕಾಸ್ಮೋಪಾಲಿಟನ್ ಕ್ಲಬ್, ಮೈಸೂರು; ಕೇಂದ್ರ ಗ್ರಂಥಾಲಯಗಳು, ಬೆಂಗಳೂರು ಹಾಗೂ ಮೈಸೂರಿನಲ್ಲಿ ; ಮುಂತಾದ ಸಂಸ್ಥೆಗಳ ಹುಟ್ಟಿಗೂ ಕಾರಣರಾದರು ಅಂದರೆ ಅವರ ಸಾಧನೆಯ ಅಳತೆಯ ಆಳದ ಒಂದೆರಡು ಅಂಶಗಳಾದರೂ ತಿಳಿದೀತು.

ಪ್ರಜಾಪ್ರಭುತ್ವ ಹಾಗೂ ರಾಷ್ಟ್ರೀಯತೆಯಲ್ಲಿ ಅಚಲ ನಂಬಿಕೆ ಹೊಂದಿದ್ದ ವಿಶ್ವೇಶ್ವರಯ್ಯನವರು ಗ್ರಾಮಪಂಚಾಯಿತಿ, ಸ್ಥಳೀಯ ಮುನಿಸಿಪಾಲಿಟಿ, ತಾಲ್ಲೂಕು ಹಾಗೂ ಜಿಲ್ಲಾ ಬೋರ್ಡ್‌ಗಳ ಸ್ವಾಯತ್ತತೆಯನ್ನು ಎತ್ತಿ ಹಿಡಿದು ಅಧಿಕಾರ ವಿಕೇಂದ್ರೀಕರಣದ ಹಲವಾರು ಉಪಯುಕ್ತತೆಗಳನ್ನು ಸಾರಿ ಹಿಡಿದರು. ೧೯೧೫ರಲ್ಲಿ ವಿಧಾನಪರಿಷತ್ತಿಗೆ ಹಲವಾರು ಮುಖ್ಯ ಪ್ರಶ್ನೆಗಳನ್ನೆತ್ತಲು ಅಧಿಕಾರ ನೀಡಲಾಗಿದ್ದೇ ಅಲ್ಲದೆ ಇವರ ಕಾಲದಲ್ಲಿ ಅದರ ಸದಸ್ಯತ್ವದ ಸಂಖ್ಯೆಯನ್ನು ೧೮ರಿಂದ ೨೪ಕ್ಕೆ ಏರಿಸಲಾಯಿತೆನ್ನುವುದೂ ಒಂದು ಮಹತ್ತರ ಅಂಶವೇ ಸರಿ. ೧೯೧೭ರಲ್ಲಿ ಪ್ರಜಾಪ್ರತಿನಿಧಿ ಸಭೆಗೆ ಮೊತ್ತಮೊದಲ ಬಾರಿಗೆಂದು ಒಂದು ಬಜೆಟ್ ಅಧಿವೇಶನ ನಡೆಸಲು ಅನುಮತಿ ನೀಡಲು ಅನುವಾಗಿದ್ದಿದ್ದೂ ವಿಶ್ವೇಶ್ವರಯ್ಯನವರ ಹೆಗ್ಗಳಿಕೆಯೇ.

ಯುದ್ಧಕಾಲದಲ್ಲಿ ಅನಿವಾರ್ಯವಾದ ಬೆಲೆಯೇರಿಕೆ, ಆಹಾರಾಭಾವಗಳನ್ನು ತಪ್ಪಿಸಲು ಅಸಂಖ್ಯಾತ ಪ್ರಗತಿಶೀಲ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಪರಿಸ್ಥಿತಿ ಹದಗೆಡದಂತೆ ಮಾಡಿ ತಮ್ಮ ಧೀಮಂತತೆಯನ್ನು ಉಳಿಸಿಕೊಂಡ ಧೀರರು ವಿಶ್ವೇಶ್ವರಯ್ಯನವರು.

೧೯೧೮ರಲ್ಲಿ ದಿವಾನಗಿರಿಯಿಂದ ವಿಶ್ವೇಶ್ವರಯ್ಯನವರು ನಿವೃತ್ತರಾದಾಗ ಅವರ ಚಿರಸ್ಮರಣೀಯ ಸೇವೆಯನ್ನು ಗುರುತಿಸಿ ಅವರಿಗಾಗಿ ಮೈಸೂರು ಸರ್ಕಾರ ಒಂದು ವಿಶೇಷ ಮೈಸೂರು ಗೆಡೆಟ್ ಪ್ರಕಟಿಸಿ ಕೃತಕೃತ್ಯಗೊಂಡಿತು. ಅದರಲ್ಲಿ ಅವರ ಸೇವೆಯ ಕುರಿತಾಗಿ ಹೀಗೆ ಹೇಳಲಾಗಿತ್ತು. ''ಅವರು ತಮ್ಮ ೬ ವರ್ಷದ ದಿವಾನಗಿರಿಯಲ್ಲಿ ಏಕಮನಸ್ಸಿನಿಂದ ಒಂದೇ ಸಮನಾಗಿ ನಾಡಿನ ಸಂಪನ್ಮೂಲಗಳ ವೃದ್ಧಿಗಾಗಿ ಶ್ರಮಿಸಿದ ಶ್ರೇಷ್ಠರು''.

**ಜಿ.ಎಸ್. ನಟರಾಜನ್**

## ಹಾಸ್ಯ ಅಯ್ಯೋ ಬಿಡಿ ! ನಮಗ್ಯಾಕೆ ಬೇರೆಯವರ ವಿಚಾರ

**ಶ್ರೀಲತ ವಿ. ಮೂರ್ತಿ**

ಶಾಂತಮ್ಮ : ಏನ್ರೀ ಶಾಂತಮ್ಮ ಆಯ್ತೇನ್ರೀ ಕೆಲ್ಸ, ಎಲ್ಲಿ ನಾಲ್ಕು ದಿನದಿಂದ ಕಾಣ್ಸಲೇ ಇಲ್ಲ

ಕಾಂತಮ್ಮ : ಹೌದು ರೀ, ಇರಲಿಲ್ಲ. ಮಗಳ ಮನೆಗೆ ಹೋಗಿದ್ದೆ.

ಶಾಂತಮ್ಮ : ಮಗಳು ಚೆನ್ನಾಗಿದ್ದಾಳೆ ಅನ್ನಿ ! ಅಂದಹಾಗೆ ಆ ಎದುರು ಮನೆ ಮೀನಾಕ್ಷಮ್ಮನ ಮಗಳ ಕಥೆ ಗೊತ್ತಾಯ್ತೆ?

ಕಾಂತಮ್ಮ : ಏನಂತೆ ? ಗೊತ್ತಾಗಲಿಲ್ಲಪ್ಪ !

ಶಾಂತಮ್ಮ : ಅಯ್ಯೋ ! ಮೂರು ದಿನದಿಂದ ಪತ್ತೇನೇ ಇಲ್ವಂತೆ. ಆ ಕಡೇ ಮನೇಲಿ ಇದ್ದನಲ್ಲಾ, ಒಬ್ಬ ಹುಡುಗ, ಅದೇ ತೆಳ್ಳಗೆ, ಬೆಳ್ಳಗೆ, ಅವನೂ ಇಲ್ವಂತೆ.. ಅವನ ಜೊತೆ ಹೋಗಿರಬಹುದು ಅಂತ ಅನುಮಾನ. ಅಯ್ಯೋ ಬಿಡಿ ನಮಗ್ಯಾಕೆ ಬೇಕು ಬೇರೆಯವರ ಮನೆ ವಿಚಾರ ಅಂತೀನಿ.

ಕಾಂತಮ್ಮ : ಓಹೋ ಹೌದೇ ! ಎಂತ ಕಾಲ ಬಂತು ನೋಡಿ ಶಾಂತಮ್ಮ, ಈಗಿನ ಕಾಲದ ಹುಡುಗರೀಗೆ ಭಯ, ಭಕ್ತಿ ಒಂದೂ ಇಲ್ಲ. ಪುಸ್ತಕ ಹಿಡ್ಕೊಂಡು ಕಾಲೇಜಿಗೆ ಅಂತ ಹೊರಟರೆ ಅದೇನು ಕಾಲೇಜಿಗೇ ಹೋಗ್ತಾರೋ,.... ಕಬ್ಬನಪಾರ್ಕಿಗೇ ಹೋಗ್ತಾರೋ .... ಒಂದೂ ಗೊತ್ತಾಗೋಲ್ಲ.

ಶಾಂತಮ್ಮ : ಅಯ್ಯೋ ಅದಿರ್ಲಿ ಆ ಗೌರಮ್ಮನ ಮನೆ ವಿಚಾರ ನೋಡಿ ಹೊಟ್ಟೆ ಉರಿದು ಹೋಗುತ್ತೆ.. ಪಾಪ ಆಕೆ ಅಷ್ಟೊಂದು ಪೂಜೆ, ಪುನಸ್ಕಾರ, ದೇವರು ದಿಂಡರು ಅಂತಾ ಇರಲಿಲ್ವೇ ಏಕಾದಶಿ ಉಪವಾಸ, ಫಲಾಹಾರ ಅಂತ, ಮಡಿಮೈಲಿಗೆ ಅಂತ ಒದ್ದಾಡ್ತಾ ಇರಲಿಲ್ವೆ? ಅವರ ಮಗ ಯಾರೋ ಜಾತಿ ಕುಲ ಇಲ್ಲದೊಳನ್ನ ಕಟ್ಕೊಂಡು ಬಂದ್ಬಿಟ್ಟಿದ್ದಾನೆ ಮೊನ್ನೆ ! ''ಇವಳು ನನ್ನ ಹೆಣ್ತಿ ನಮಸ್ಕಾರ ಮಾಡ್ತೀನಿ ಆಶೀರ್ವಾದ ಮಾಡಿ ಅಂದ್ನಂತೆ''.

ಕಾಂತಮ್ಮ : ಅಯ್ಯೋ ಪಾಪ ತುಂಬಾ ಅನ್ಯಾಯ ಆಯ್ತು ಆಕೆಗ. ಇನ್ನು ಹೇಗೆ ಹೊಂದ್ಕೊಂಡು ಹೋಗ್ತಾರೋ ಏನೋ? ಮೊದ್ಲಿಂದ್ಲು ಮಡಿ, ಮೈಲಿಗೆ, ಆಚಾರ, ವಿಚಾರ ಅಂತಾ ಇದ್ದೋರು...

ಶಾಂತಮ್ಮ : ಹೊಂದೋದೇನು ಬಂತು ಕಾಂತಮ್ಮ , ಆ ಸೀತಮ್ಮನ ಮನೇಲಿ ಅತ್ತೆಗೂ ಸೊಸೆಗೂ ಯದ್ವಾತದ್ವಾ ಜಗಳ. ಬೇರೆ ಮನೆ ಮಾಡ್ದ ಹೊರ್ತು ಆಗೋದೇ ಇಲ್ಲ ಅಂತಾಳಂತೆ ಆ ಸೊಸೆ.

ಕಾಂತಮ್ಮ : ಇದೇನು ಹೀಗಂತೀರಿ ! ಅವರು ತುಂಬಾ ಹೊಂದ್ಕೊಂಡು ಇದ್ರಲ್ಲ ಅತ್ತೆ ಸೊಸೆ , ಇದ್ದಕ್ಕಿದ್ದ ಹಾಗೆ ಯಾಕೆ ಹೀಗಾಯ್ತು? ಏನೋ ಯಾರಿಗೆ ಗೊತ್ರಿ ಸಂಸಾರದ ಒಳಗುಟ್ಟು ಕಂಡೋರ ಕಣ್ಣಿಗೆ ಚೆನ್ನಾಗಿರೋ ತರಾನೇ ಕಾಣುತ್ತೆ ಎಲ್ಲ ನಮಗ್ಯಾಕ್ರೀ ಬೇರೆಯವರ ವಿಚಾರ !

ಶಾಂತಮ್ಮ : ಹೌದ್ರಿ ನೀವು ಹೇಳೋದು ಸರಿ. ನಮ್ದೇ ನಮಗೆ ಸಾಕಾಗಿ ಹೋಗಿದೆ, ನಮಗ್ಯಾಕ್ರೀ ಬೇರೆಯವರ ಸಮಾಚಾರ ಅಲ್ವೇ?

ಶಾಂತಮ್ಮ : ಅಂದ ಹಾಗೇ, ಮೊನ್ನೆ ನಿಮ್ಮ ಮಗ ಏನೋ ಹೇಳ್ತಾ ಇದ್ದ. ಆಂಟೀ, ನಮ್ಮ ಅಪ್ಪ ಅಮ್ಮಂಗೆ ಸಖತ್ತು ಜಗಳ... ಅದೇನೋ ನಮ್ಮ ಡ್ಯಾಡೀಗೂ ಅವರ office assistant ಜಾನಕಿ ಆಂಟಿಗೂ ಏನೋ ಗುಸುಗುಸು ಅಂತೆ ಅಂದ. ನಂಗೆ ಸರಿಯಾಗಿ ತಿಳೀಲಿಲ್ಲ. ಹುಡುಗರ ಹತ್ರ ಏನ್ ಮಾತಾಡೋದು ದೊಡ್ಡೋರ ವಿಚಾರ ಅಂತ ಸುಮ್ಮನಾದೆ. ಅದಕ್ಕೇ ನೀವು ಬೇಜಾರು ಮಾಡ್ಕೊಂಡು ಊರಿಗೆ ಹೋಗಿದ್ರೋ ಏನೋ ಅಲ್ವೇ ಪಾಪ.

ಕಾಂತಮ್ಮ : ಅಯ್ಯೋ ಬಿಡಿ, ಎಲ್ಲರ ಮನೆ ಹಣೇಬರಹಾನೂ ಒಂದೇ. ಆ ವಿಷಯ ಯಾಕ್ರೀ ಮಾತಾಡೋದು? ನಮ್ಮನೆಯವರಿಗೆ ಈ ವಯಸ್ಸಿನಲ್ಲಿ ಯಾಕೆ ಇಂತಾ ಬುದ್ಧಿ ಹೇಳಿ. ಸಿಟ್ಟು ಮಾಡ್ಕೊಂಡು ಎಷ್ಟು ದಿನ ಎಲ್ಲಿ ಹೋಗೋಕೆ ಆಗುತ್ತೆ ಹೇಳಿ? ಸುಮ್ಮಗೆ ಗಾಳಿ ಮಾತು. ನಾನು ಇವರನ್ನು ಕೇಳ್ದೆ ಅಷ್ಟೆ. ಇನ್ನೇನು ಇಲ್ಲಾರಿ ಶಾಂತಮ್ಮ. ಬರ್ತೀನಿ. ತುಂಬಾ ಕೆಲ್ಸ ಇದೇರಿ. ನಮಗ್ಯಾಕ್ರೀ ಬೇಕು ಬೇರೆಯವರ ವಿಚಾರ.

ಶಾಂತಮ್ಮ : ಹೌದು ಕಾಂತಮ್ಮ. ನಮಗ್ಯಾಕೆ ಬೇರೆಯವರ ವಿಷಯ... ಬರ್ತೀನಿ. ಆ ಮೂಲೆಮನೆ ಗಂಗಮ್ಮ ಪುರುಸೊತ್ತು ಆದಾಗ ಬನ್ನಿ ಅಂದಿದ್ರು, ಅವರ ಮನೆಗೆ ಹೋಗ್ಬೇಕು.. ಬರ್ಲೇ?

ಪ್ರಕಾಶಕರು : ಲಹರಿ ವಕೀಲರ ವೇದಿಕೆ, ಸಂ. ೨೯೮೦ ''ಲಕ್ಷ್ಮೀದೀಪ್'', ೧೭ನೇ ಅಡ್ಡರಸ್ತೆ, ಬನಶಂಕರಿ ೨ನೇ ಹಂತ, ಬೆಂಗಳೂರು–೫೬೦ ೦೭೦. ಮುದ್ರಕರು : ಪರಿಮಳ ಮುದ್ರಣಾಲಯ, ಮೌಂಟ್‌ಜಾಯ್ ಬಡಾವಣೆ, ಹನುಮಂತನಗರ, ಬೆಂಗಳೂರು–೫೬೦ ೦೧೯, ದೂರವಾಣಿ : ೬೫೨೫೫೧೬. ಸಂಪಾದಕರು : ಜಿ. ಎಸ್. ನಟರಾಜನ್, ಸಹ ಸಂಪಾದಕರು : ವಿ. ಎನ್. ಮೂರ್ತಿ